# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ

**ಸಿ.ಸಿ.ನಂ. 585/2014**

ಫಿರ್ಯಾದಿಃ ಕರ್ನಾಟಕ ಸರಕಾರ ಪರ ಸೇಡಂ ಪೋಲಿಸ ಠಾಣೆ

**: ವಿರುದ್ಧ :**

**ಆರೋಪಿ/ತರುಃ**

1. ಭೀಮು ತಂದೆ ಶರಣಪ್ಪಾ ಸಾತಾಗೋಳ ವಯಾಃ 24 ವರ್ಷ, ಉಃ ವಿಸಿಎಫ್ ನಲ್ಲಿ ಕೆಲಸ ಸಾಃ ಬಟಗೇರಾ (ಬಿ) ಗ್ರಾಮ ತಾಃ ಸೇಡಂ.
2. ಶರಣಪ್ಪ ತಂದೆ ನರಸಣ್ಣಾ ಸಾತಾಗೋಳ ವಃ 52 ವರ್ಷ ಉಃ ವಿಸಿಎಫ್ ನಲ್ಲಿ ಕೆಲಸ ಸಾಃ ಬಟಗೇರಾ (ಬಿ) ಗ್ರಾಮ, ತಾಃ ಸೇಡಂ.

*****

## ದೋ ಷಾ ರೋ ಪ ಣೆ

ನಾನು ***ಶ್ರೀ ಮಹಾದೇವ ಕಾನಟ್ಟಿ, ಬಿಕಾಂ ಎಲ್ ಎಲ್ ಬಿ.,*** ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು, ಸೇಡಂ, ನಿನ್ನ ಮೇಲೆ ಹೊರಿಸುವ ಆರೋಪವೆನೆಂದರೆ,

ದಿನಾಂಕ 25-07-2014 ರಂದು ಮಧ್ಯಾಹ್ನ 03-00 ಘಂಟೆಯ ಸುಮಾರಿಗೆ ಬಟಗೇರಾ (ಬಿ) ಗ್ರಾಮದಲ್ಲಿರುವ ಪಿರ್ಯಾದಿದಾರರ ಮನೆಯ ಹತ್ತಿರದ ರಸ್ತೆಯ ಮೇಲೆ ಚಾಸಾ-1 ರವರು ನಡೆದುಕೊಂಡು ಬರುತ್ತಿದ್ದಂತಹ ಸಮಯದಲ್ಲಿ ಆರೋಪಿತರೀರ್ವರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು ಚಾಸಾ-1ರವರಿಗೆ ಮುಂದೆ ಹೋಗದಂತೆ ನಿರ್ಬಂಧನೆಯನೊಡ್ಡಿದ್ದಾರೆಂದು ಇರುತ್ತದೆ. ಆದ್ದರಿಂದ ನೀವು ಭಾ.ದಂ.ಸಂ. ಕಲಂ 341 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಇದು ನನ್ನ ಸಂಜ್ಞೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಿದ ದಿನಾಂಕ, ಸುಮಯ ಹಾಗೂ ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು, ಚಾಸಾ-1 ರವರಿಗೆ ಮುಂದೆ ಹೋಗದಂತೆ ತಡೆಯನ್ನೊಡ್ಡಿ ಅವರಿಗೆ "ನಿನಗೆ ಸೊಕ್ಕು ಜಾಸ್ತಿ ಆಗಿದೆ ನಿನು ನಮ್ಮ ಓಣಿಯಲ್ಲಿ ಮನೆ ಯಾಕೆಕ ಕಟ್ಟಿದಿ ಗೇಟ ಹೊರಗೆ ಯಾಕೆ ಕುಡಿಸಿದ್ದಿಯಾ" ಎಂದು ಅವಾಚ್ಯ ಶಬ್ದಗಳಿಂದ ಬೈದು ಅವಮಾನ ಪಡಿಸಿದ್ದು. ಆದ್ದರಿಂದ ನೀವು ಭಾ.ದಂ.ಸಂ. ಕಲಂ 504 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಇದು ನನ್ನ ಸಂಜ್ಞೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಿದ ದಿನಾಂಕ, ಸುಮಯ ಹಾಗೂ ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದು ಚಾಸಾ-1 ರವರಿಗೆ ಅವಾಚ್ಯ ಶಬ್ಬಗಳಿಂದ ಬೈದು 1ನೇ ಅರೋಪಿಯು ಚಾಸಾ-1ರವರ ಎದೆಯ ಮೇಲಿನ ಅಂಗಿ ಹಿಡಿದು ಕೈಯಿಂದ ಕಪಾಳಕ್ಕೆ ಹೊಡೆದು ಗುಪ್ತಗಾಯಪಡಿಸಿದ್ದು ಆದ್ದರಿಂದ ನೀವು ಭಾ.ದಂ.ಸಂ.ಕಲಂ 323 ಸಹವಾಚಕ ಕಲಂ 34 ರಡಿಯಲ್ಲಿ ಶಿರ್ಕಾರ್ಹ ಅಪರಾಧ ಎಸಗಿರುತ್ತಿರಿ. ಇದು ನನ್ನ ಸಂಜ್ಞೆಗೆ ಬಂದಿರುತ್ತದೆ.

ನಾಲ್ಕನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದಿದ್ದು ಚಾಸಾ-1 ರವರಿಗೆ ಅವಾಚ್ಯ ಶಬ್ಬಗಳಿಂದ ಬೈದು 1ನೇ ಅರೋಪಿಯು ಚಾಸಾ-1ರವರ ಎದೆಯ ಮೇಲಿನ ಅಂಗಿ ಹಿಡಿದು ಕೈಯಿಂದ ಕಪಾಳಕ್ಕೆ ಹೊಡೆದಿದ್ದು ಹಾಗೂ 01ಮತ್ತು 2ನೇ-ಆರೋಪಿತರು ಕಟ್ಟಿಗೆಯಿಂದ ಬೆನ್ನಿನ ಮೇಲೆ ಹೊಡೆದು ಗಾಯಪಡಿಸಿರುತ್ತಾರೆ. ಆದ್ದರಿಂದ ನೀವು ಭಾ.ದಂ.ಸಂ. ಕಲಂ 324 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ. ಇದು ನನ್ನ ಸಂಜ್ಞೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರು ಸಮಾನೋದ್ದೇಶದಿಂದ ಕೂಡಿಕೊಂಡು ಬಂದಿದ್ದು ಚಾಸಾ-1 ರವರಿಗೆ ಅವಾಚ್ಯ ಶಬ್ಬಗಳಿಂದ ಬೈದು ಹೊಡೆಬಡೆ ಮಾಡಿ "ಸೂಳೆ ಮಗನೆ ಖಲಾಸ್ ಮಾಡುತ್ತೇವೆ" ಎಂದು ಜೀವಬೆದರಿಕೆಯನ್ನೊಡ್ಡಿದ್ದಾರೆಂದು ಆದ್ದರಿಂದ ನೀವು ಭಾ.ದಂ.ಸಂ. ಕಲಂ 506 ಸಹವಾಚಕ ಕಲಂ 34 ರಡಿಯಲ್ಲಿ ಶಿಕ್ಷಾರ್ಹ ಅಪರಾಧವೆಸಗಿದ್ದು ನನ್ನ ಸಂಜ್ಞೆಯಲ್ಲಿರುತ್ತದೆ.

ಕಾರಣ ಮೇಲೆ ಹೇಳಿದ ಆಪರಾದಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಪ್ರ:- 1) ಈಗ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉತ್ತರ:- ಆ-1 ಆ-2

ಪ್ರ:- 2) ನೀವು ತಪ್ಪನ್ನು ಒಪ್ಪಿಕೊಳ್ಳುತ್ತೀರಾ ಅಥವಾ ವಿಚಾರಣೆ ನಡೆಯಬೇಕಾ ?

ಉತ್ತರ:- ಆ-1 ಆ-2

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ )

ದಿನಾಂಕ:- 05-08-2017 ಪ್ರ. ದ. ನ್ಯಾ. ದಂ. ಸೇಡಂ.